ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ 10 ದಿನಾಂಕ : DATE: 7/3/2021

# ಬಿಜೆಪಿಗೆ ಸ್ವಲ್ಪ ಮಟ್ಟಿನ ಮುಜುಗರ

**ಬೆಂಗಳೂರು:** ಸಿಡಿಯೊ ವಿಚಾರದಲ್ಲಿ ಪಕ್ಷವು ಸ್ವಲ್ಪ ಮಟ್ಟಿನ ಮುಜುಗರ ಅನುಭವಿಸಬೇಕಾಗಿದೆ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಅವರು ಬೇಸರ ವ್ಯಕ್ತಪಡಿಸಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿ, "ರಾಜಕೀಯ ದ್ವೇಷ ಮತ್ತು ದೊಂಬರಾಟದಲ್ಲಿ ಸಿಡಿಯೊ ತನ್ನದೇ ಪ್ರಭಾವವನ್ನು ಸಮಾಜದಲ್ಲಿ ಬೀರುತ್ತದೆ. ಆಪರೇಶನ್ ನಡೆಸುವುದಕ್ಕೂ ತೊಂದರೆಯಾಗುತ್ತದೆ," ಎಂದು ಹೇಳಿದರು.

"ಈಗ ತಂತ್ರಜ್ಞಾನ ಸಾಕಷ್ಟು ಬೆಳೆದಿದೆ. ಯಾರು ಬೇಕಾದರೂ ಎಷ್ಟೇ ಕುಳಿತು ಏನೂ ಬೇಕಾದರೂ ಮಾಡಬಹುದು. ಯಾರ ಮುಖವನ್ನು ಯಾರಿಗೂ ಜೋಡಿಸಬಹುದು. ಧ್ವನಿಯನ್ನೂ ತಿರುಚಬಹುದು. ಎಲ್ಲವೂ ಹಾಗೇ ಆಗುತ್ತದೆ ಎಂದು ನಾನು ಹೇಳುವುದಿಲ್ಲ," ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

"ಸಾರ್ವಜನಿಕ ವ್ಯವಸ್ಥೆಯಲ್ಲಿ ಇರುವ ವ್ಯಕ್ತಿಗಳು ನೈತಿಕತೆಗೆ ಪ್ರಾಮುಖ್ಯತೆ ನೀಡಬೇಕಾಗುತ್ತದೆ, ಅದು ನಮ್ಮ ಜವಾಬ್ದಾರಿಯೂ ಹೌದು. ನೈತಿಕತೆಗೆ ತೊಂದರೆ ಬಂದಾಗ ಸಮಾಜದಲ್ಲಿ ವ್ಯತಿರಿಕ್ತ ಪರಿಣಾಮ ಎದುರಿಸಬೇಕಾಗುತ್ತದೆ. ಆಗ ಮೌಲ್ಯಗಳು ಅಧಃಪತನವಾಗುತ್ತವೆ," ಎಂದರು.

"ಸಿಡಿಯೊ, ಸಿ.ಡಿ ಸೃಷ್ಟಿಸುವ ಹಲವು ಸನ್ನಿವೇಶಗಳು ಸೂಕ್ಷ್ಮ ವಿಚಾರವಾಗಿದೆ. ಮಾತನಾಡುವಾಗ ಎಚ್ಚರಿಕೆಯನ್ನು ವಹಿಸಬೇಕು. ಇದರಿಂದ ಹೊರಹೊಮ್ಮುವ ಹೇಳಿಕೆಯನ್ನು ತಪ್ಪಾಗಿಯೂ ಭಾವಿಸಲಾಗುತ್ತದೆ. ರಾಜಕೀಯವಾಗಿ ಲಾಭ ಮಾಡಿಕೊಳ್ಳುವ ಜನರೂ ಇರುತ್ತಾರೆ," ಎಂದರು.

■ ವಿಕ ಸುದ್ದಿಲೋಕ ಮಂಗಳೂರು

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಪ್ರಕರಣದ ಬಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯ ಸದನದಲ್ಲಿ ಚರ್ಚೆ ಮಾಡಲಿ. ಅದನ್ನು ಬಿಟ್ಟು ಏನೂ ಇಲ್ಲದೆ ಬೂಟಾಟಿಕೆ ಮಾಡಿಕೊಂಡು ಸದನ ನಡೆಸಲು ಬಿಡದಿರುವುದು ಅವರ ಹುಟ್ಟುಗುಣ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, "ಸಿಡಿಯೊ ಬಗ್ಗೆ ಚರ್ಚೆ ಮಾಡಬೇಕಾದರೆ ಅಜೆಂಡಾ ತೆಗೆದು ಮಾಡಲಿ. ಅದನ್ನು ಬಿಟ್ಟು ಸದನದ ಕಾರ್ಯಕಲಾಪ ಸ್ಥಗಿತಗೊಳಿಸುವ ಅಗತ್ಯವಿದೆಯೇ," ಎಂದು ಪ್ರಶ್ನಿಸಿದರು.

> ಕೇಂದ್ರ ನಾಯಕರು ಮತ್ತು ಪಕ್ಷದ ಪ್ರಮುಖರ ಗಮನಕ್ಕೆ ತಂದೇ ನಾವು ಕೋರ್ಟ್ ಮೊರೆ ಹೋಗಿದ್ದೇವೆ. ಕೇಂದ್ರ ಸಚಿವ ಸದಾನಂದಗೌಡ ಅವರಿಗೆ ಈ ಬಗ್ಗೆ ಮಾಹಿತಿ ಕೊರತೆ ಇದೆ ಎನ್ನಿಸುತ್ತದೆ. ಅವರ ಗಮನಕ್ಕೂ ತರುತ್ತೇವೆ.
>
> -ಡಾ. ಸುಧಾಕರ್ ಸಚಿವ

"ನಾವು ಸಚಿವರು, ನಮಗೆ ಜವಾಬ್ದಾರಿಗಳಿವೆ. ಅದರಂತೆ ನಾವು ವರ್ತಿಸಬೇಕು. ಸಿಡಿಯೊ ಬಗ್ಗೆ ಪೊಲೀಸ್ ತನಿಖೆ ನಡೆಯುತ್ತಿರುವಾಗ ಪಾರದರ್ಶಕವಾಗಿ ಬಾಯಿಗೆ ಬಂದಂತೆ ಮಾತನಾಡಿ, ದಾರಿ ತಪ್ಪಿಸುವುದು ಸರಿಯಲ್ಲ. ಚರ್ಚೆಗೆ ವಿಧಾನಸಭೆ ಅತ್ಯಂತ ಪ್ರಶಸ್ತ ಜಾಗ. ಅದು ಬಿಟ್ಟು ಮಾಜಿ ಸಿಎಂ ಆಗಿದ್ದವರು ಹೊರಗೆ ಬಂದು ಬಾಯಿಗೆ ಬಂದಂತೆ ಮಾತನಾಡಿ ಸಣ್ಣತನ ತೋರಿಸುವುದು ಅವರಿಗೆ ಶೋಭೆ ತರುವಂಥದ್ದಲ್ಲ," ಎಂದರು.

"ಯಾರೋ ಬ್ಲ್ಯಾಕ್‌ಮೇಲ್ ತಂತ್ರ ಮಾಡಿದ್ದರೆ, ಮುಜುಗರಕ್ಕೊಳಗಾಗಿ ಸರಕಾರ ನಡೆಸದೆ ಇರಲು ಸಾಧ್ಯವಾ? ನಾವು ಪೊಲೀಸರ ಮೇಲೆ ಯಾವುದೇ ಒತ್ತಡ, ಹಸ್ತಕ್ಷೇಪವಿಲ್ಲದೆ ತನಿಖೆ ಮಾಡಲು ಹೇಳಿದ್ದೇವೆ. ಕೆಲವರ ಸಿಎಂ ಮೇಲೆಯೇ ಆರೋಪ ಬಂದಿದೆ. ಹಾಗಂತ ನಾವು ಅವರನ್ನು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸುತ್ತಿದ್ದೇವಾ? ಇ.ಡಿ ತನಿಖೆ ನಡೆದರೆ, ಸಿಎಂ ಕೈಗೊಳ್ಳಬೇಕು." ಎಂದು ಡಿ.ವಿ.ಸದಾನಂದ ಗೌಡ ಹೇಳಿದರು.

**ಬೆಂಗಳೂರು:** ರಮೇಶ್ ಜಾರಕಿಹೊಳಿ ಕುರಿತ ಸಿಡಿಯೊ ಬಹಿರಂಗಕ್ಕೆ ಕನಕಪುರ, ಬೆಳಗಾವಿಯವರೇ ಕಾರಣ ಎಂದು ಸಚಿವ ಯೋಗೇಶ್ವರ್ ಆರೋಪಿಸಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿ, "ಕೆಲವು ಸಚಿವರು ನ್ಯಾಯಾಲಯಕ್ಕೆ ಹೋದ್ದು ನನಗೇಕೆ ಪ್ರಶ್ನೆ ಮಾಡುತ್ತೀರಾ? ಅದು ಸಾಮೂಹಿಕ ವಿಚಾರವಲ್ಲ. ವೈಯಕ್ತಿಕವಾಗಿದೆ. ಅನಗತ್ಯವಾಗಿ ನನಗೆ ಸಂಬಂಧಿಸಿಲ್ಲದ ವಿಚಾರಕ್ಕೆ ಪ್ರತಿಕ್ರಿಯೆ ನೀಡುವುದಿಲ್ಲ," ಎಂದರು. "ಒಬ್ಬ ಸಚಿವರ ರಾಜೀನಾಮೆಗೆ ಕಾರಣರಾದವರೂ ಮುಂದಿನ ದಿನಗಳಲ್ಲಿ ಇಂಥದ್ದೇ ಸಂಕಷ್ಟ ಅನುಭವಿಸುತ್ತಾರೆ," ಎಂದರು.

## ನನಗೆ ಸಂಬಂಧವಿಲ್ಲದ ವಿಚಾರ

**ಹುಬ್ಬಳ್ಳಿ:** ರಮೇಶ್ ಜಾರಕಿಹೊಳಿ ಸಿಡಿಯೊ ಪ್ರಕರಣದಲ್ಲಿ ನನ್ನ ಹೆಸರು ಏಕೆ ಕೇಳಿ ಬರುತ್ತಿದೆ ಎಂಬುದು ನನಗೂ ಗೊತ್ತಿಲ್ಲ. ಅಲ್ಲದೆ, ಸಿಡಿಯೊ ವಿಚಾರದ ಬಗ್ಗೆ ನಾನೇನೂ ಮಾತನಾಡಲ್ಲ ಎಂದು ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, "ಗೋಕಾಕ್ ಪ್ರತಿಭಟನೆಯಲ್ಲಿ ನನ್ನ ಹೆಸರು ಏಕೆ ಎಳೆದು ತರಲಾಗುತ್ತಿದೆ. ಅಲ್ಲದೆ, ಸಿಡಿಯೊ ವಿಚಾರದಲ್ಲಿಯೂ ನನ್ನ ಹೆಸರು ಕೇಳಿಬರುತ್ತಿದೆ. ಇದ್ಯಾವುದೂ ನನಗೆ ಸಂಬಂಧಿಸಿಲ್ಲ," ಎಂದರು.

# ಸೆಷನ್ ಪೂರ್ತಿ ಸಸ್ಪೆಂಡ್ ಮಾಡಿ

■ ವಿಕ ಸುದ್ದಿಲೋಕ ಹುಬ್ಬಳ್ಳಿ

ಸದನದಲ್ಲಿ ಅಂಗಿ ಬಿಚ್ಚುವ ಮೂಲಕ ಸ್ವಪಕ್ಷದವರಿಗೆ ಹಾಗೂ ಸದನದ ಘನತೆಗೆ ಅಗೌರವ ತೋರಿದ ಭದ್ರಾವತಿಯ ಕಾಂಗ್ರೆಸ್ ಶಾಸಕ ಬಿ.ಕೆ. ಸಂಗಮೇಶ್ವರ್ ಅವರನ್ನು ಇಡೀ ಅಧಿವೇಶನ ಮುಗಿಯುವವರೆಗೂ ಹೊರಗೆ ಇಡಬೇಕು ಎಂದು ಸಚಿವ ಜಗದೀಶ್ ಶೆಟ್ಟರ್ ಆಗ್ರಹಿಸಿದರು.



ಶನಿವಾರ ಸುದ್ದಿಗಾರರ ಜತೆ ಮಾತನಾಡಿ, "ಶಾಸಕ ಸಂಗಮೇಶ್ವರ್ ಸ್ಪೀಕರ್ ಅವರಿಗೆ ಗೌರವ ನೀಡದೇ ಅಧಿವೇಶನದಲ್ಲಿ ಶರ್ಟ್ ಬಿಚ್ಚಿ ಹಾಕುವ ಹಾಗೆ ಬಿಡಬೇಕು. ಹೊರಗೇ ಅಗೌರವ ನಡೆಗೆ ಕಠಿಣ ಕ್ರಮವಹಿಸಬೇಕು" ಎಂದರು.

"ಸಂಗಮೇಶ್ವರ್ ಪರ ಮಾತನಾಡುವ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ನಡೆಯೂ ಸರಿಯಲ್ಲ. ಹಿಂದೆ ಒಂದು ವರ್ಷ ಸಿಎಂ ಆಗಿರುವ ಅವರು ಸದನದ ಘನತೆಗೆ ಅಗೌರವ ತೋರಿದ ಶಾಸಕನ ಬೆನ್ನಿಗೆ ನಿಂತಿರುವುದು ನಾಚಿಕೆಗೇಡಿನ ಸಂಗತಿ" ಎಂದರು.

ನಮ್ಮ ಶಾಸಕರು ಕೇವಲ ಶರ್ಟ್ ಮಾತ್ರ ಬಿಚ್ಚಿದ್ದಾರೆ. ಪೂರ್ತಿ ಬಟ್ಟೆ ಬಿಚ್ಚಿಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಶೆಟ್ಟರ್, "ಮುಂದಿನ ಅಧಿವೇಶನದಲ್ಲಿ ತಮ್ಮ ಶಾಸಕರಿಂದ ಪೂರ್ತಿ ಬಟ್ಟೆ ಬಿಚ್ಚಿಸುವ ಉದ್ದೇಶವನ್ನು ಹೊಂದಿದ್ದಾರಾ" ಎಂದು ಕುಟುಕಿದರು.

**ಹುಬ್ಬಳ್ಳಿ:** ಭದ್ರಾವತಿ ಶಾಸಕ ಸಂಗಮೇಶ್ವರ್ ಶರ್ಟ್ ಬಿಚ್ಚಿದ ಪ್ರಕರಣದಿಂದ ವೈಯಕ್ತಿಕವಾಗಿ ಬಹಳ ನೋವಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, "ಜನಪ್ರತಿನಿಧಿಗಳು ಕೆಲವು ವಿಷಯಗಳಲ್ಲಿ ಸಮಾಧಾನದಿಂದ ವರ್ತಿಸಬೇಕು. ಸಭಾಪತಿ ಅಥವಾ ಸ್ಪೀಕರ್ ಬಳಿ ಹೋಗಿ ಮನವಿ ಮಾಡಬೇಕು. ಇದನ್ನು ಹೊರತುಪಡಿಸಿ ಮೈಮೇಲಿನ ಬಟ್ಟೆ ಬಿಚ್ಚುವುದು, ಮತ್ತಿತರ ಅಸಭ್ಯಕರ ರೀತಿಯಲ್ಲಿ ವರ್ತಿಸುವುದು ಸರಿಯಲ್ಲ" ಎಂದರು.

**ಚಳ್ಳಕೆರೆ:** ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ ಪುತ್ರ ಬಸವೇಶ್ ಅವರನ್ನು ಖಾಸಗಿ ಹೋಟೆಲ್ ರೆಸಾರ್ಟೊಂದರಿಂದ ಭದ್ರಾವತಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ. ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಕಬಡ್ಡಿ ಪಂದ್ಯಾವಳಿ ವೇಳೆ ನಡೆದ ಗಲಾಟೆ ಹಿನ್ನೆಲೆಯಲ್ಲಿ ಬಸವೇಶ್ ಸೇರಿದಂತೆ ಕೆಲವರ ವಿರುದ್ಧ ದೂರು ದಾಖಲಾಗಿತ್ತು. ವಶಕ್ಕೆ ಪಡೆದ ವಿಚಾರದ ಮಾಹಿತಿ ಇಲ್ಲ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

> ಭದ್ರಾವತಿಯಲ್ಲಿ ಬಿಜೆಪಿಗೆ ನೆಲೆ ಕಂಡುಕೊಳ್ಳಲು ನನ್ನ ಕುಟುಂಬದ ಮೇಲೆ ಪ್ರಕರಣ ದಾಖಲಿಸಿ ಷಡ್ಯಂತ್ರ ರೂಪಿಸಿದೆ. ಈ ಕೃತ್ಯದಲ್ಲಿ ಬಿ.ಎಸ್.ವೈ ಅವರನ್ನು ಶಿವಮೊಗ್ಗ ಜನರು ಕ್ಷಮಿಸುವುದಿಲ್ಲ. ಬಿಎಸ್‌ವೈ, ಬಿ.ವೈ ರಾಘವೇಂದ್ರ ಮತ್ತು ಈಶ್ವರಪ್ಪ ಅವರ ದಾಳಗಳ ಬಗ್ಗೆ ನನ್ನ ಬಳಿ ದಾಖಲೆ ಇದೆ.
>
> -ಬಿ.ಕೆ. ಸಂಗಮೇಶ್ವರ್ ಭದ್ರಾವತಿ ಶಾಸಕ